ಉತ್ತರ ಕೊಟ್ಟಿದ್ದಾರೆ. ಇದು ನನ್ನ ಗಮನಕ್ಕೂ ಕೂಡ ಬಂದಿದೆ. ಆದರೆ ಆ ಬಗ್ಗೆ ಯೋಜನಾ ರೂಪದಲ್ಲಾಗಲೀ ಅಥವಾ ಒಂದು ಸ್ಪೆಸಿಫಿಕ್ ಪ್ರಾಜೆಕ್ಟ್ ಅನ್ನಾಗಲೀ ಮಾಡುತ್ತೇವೆಂದು ಯಾರೂ ಕೂಡ ಮುಂದೆ ಬಂದಿಲ್ಲ. ತುಮಕೂರು ಜಿಲ್ಲೆಯಲ್ಲಿ ತೆಂಗು ಬಹಳ ಮುಖ್ಯವಾದ ಬೆಳೆಯಾಗಿದೆ. ಕೇಂದ್ರ ಸರಕಾರದವರು ಯಾವುದಾದರೊಂದು ಯೋಜನೆಯಲ್ಲಿ ತೆಂಗು ಸಂಶೋಧನಾ ಕೇಂದ್ರವನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದರೆ ಮಂತ್ರಿ ಅವರಿಗೆ ಜಮೀನು ಎಷ್ಟು ಬೇಕಾಗುತ್ತದೆ ಎಂದು ಹೇಳಿದರೆ ಖಂಡಿತಾ ನಾವು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

## ಮಾರ್ಕಂಡೆಯ ಯೋಜನೆ ಬಗ್ಗೆ

೧೫೬೭. ಶ್ರೀ ಎಂ. ಎಲ್. ಮುತ್ತಣ್ಣನವರ್(ಗೋಕಾಕ್).—ಮಾನ್ಯ ಕಂದಾಯ ಮತ್ತು ಯೋಜನಾ ಹಾಗೂ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಾರ್ಕಂಡೆಯ ಯೋಜನಾ ಅಂದಾಜು ವೆಚ್ಚವೆಷ್ಟು ?

ಆ) ಮಾರ್ಕಂಡೆಯ ಯೋಜನೆಯ ಕೆಲಸವನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು,

ಇ) ಮಾರ್ಕಂಡೆಯ ಯೋಜನೆಯಲ್ಲಿ ಎಷ್ಟು ಹಳ್ಳಿಗಳು ಮುಳುಗಡೆ ಆಗುವುವು ಹಾಗೂ ಅವು ಯಾವುವು

ಈ) ಆ ಹಳ್ಳಿಗಳ ಜನರಿಗೆ ಪುನರ್ವಸತಿ ಒದಗಿಸಲು ಕ್ರಮ ಕೈಗೊಳ್ಳಲಾಗುವುದೆ ?

ಉ) ಈ ಯೋಜನೆಗೆ ವಿಶ್ವ ಬ್ಯಾಂಕಿನಿಂದ ಹಣದ ಸಹಾಯ ದೊರೆತಿದೆಯೆ ?

ಶ್ರೀ ಎಸ್. ಆರ್. ಬೊಮ್ಮಾಯಿ(ಕಂದಾಯ, ಯೋಜನೆ, ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು).—

ಅ) ಯಿಂದ
ಉ) ವರೆಗೆ } ಈ ಯೋಜನೆಯು ಇನ್ನೂ ಅನ್ವೇಷಣಾ ಹಂತದಲ್ಲಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾರ್ಕಂಡೆಯ ಯೋಜನೆ ಬಗ್ಗೆ ಈಗಾಗಲೇ ಪ್ಲಾನ್ ಎಸ್ಟಿಮೇಟ್ ತಯಾರಾಗಿ ಬಂದಿತ್ತು. ಪುನಃ ಕೆಲವು ವಿವರಗಳು ಬೇಕಾಗಿರುವುದರಿಂದ ಅದನ್ನು ಪಡೆದು ಆದಷ್ಟು ಬೇಗ ಇದನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಎಂ. ಎಲ್. ಮುತ್ತಣ್ಣನವರ್.—ಹಿರಿಯ ಮಂತ್ರಿಗಳಾದ ಶ್ರೀ ಬೊಮ್ಮಾಯಿ ಅವರು ಬೆಳಗಾಂಗೆ ಬಂದಾಗ ಇದಕ್ಕೆ ಈ ಯೋಜನೆಗೆ ಅಡಿಗಲ್ ಅನ್ನು ಹಾಕುತ್ತೇವೆ ಕೆಲಸ ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ. ಯಾವಾಗ ಇದನ್ನು ಪ್ರಾರಂಭ ಮಾಡುತ್ತಾರೆ, ಇದು ಇನ್ನೂ ಅನ್ವೇಷಣಾ ಹಂತದಲ್ಲಿದೆಯೆಂದು ಈಗ ಉತ್ತರ ಕೊಟ್ಟಿದ್ದೀರಿ. ಆದರೆ ಈ ಹಿಂದೆ ಇದರ ಕೆಲಸ ಮುಗಿದಿದೆ ಎಂದು ಉತ್ತರ ಕೊಟ್ಟಿದ್ದಾರೆ. ಹಾಗಿದ್ದರೆ ಇದು ಅಧಿಕಾರಿಗಳ ತಪ್ಪೇ. ಮಾನ್ಯ ಮಂತ್ರಿಗಳು ಸೂಕ್ತ ಕ್ರಮವನ್ನು ಕೈಗೊಳ್ಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದನ್ನು ಟೆಕ್ನಿಕಲ್ ಕಮಿಟಿ ಮುಂದೆ ಇಟ್ಟಿದ್ದೇವೆ. ಬಾಳೇಕುಂದ್ರಿ ಕಮಿಟಿಯವರು ಕೆಲವು ಸಲಹೆಗಳನ್ನು ಮಾಡಿದ್ದಾರೆ. ವಿವರವನ್ನು ಪಡೆದು ಆದಷ್ಟು ಬೇಗ ಪ್ರಾರಂಭ ಮಾಡುತ್ತೇವೆ.

## ಖಾಸಗೀ ಶಾಲೆಗಳು ಹಾಗೂ ಟ್ಯುಟೋರಿಯಲ್‌ಗಳು.

೨೧೨೬. ಶ್ರೀ ಪಿ. ಎಂ. ಚಿಕ್ಕಬೋರಯ್ಯ(ಚಾಮರಾಜ).—ಮಾನ್ಯ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಒಟ್ಟು ಖಾಸಗಿ ಶಾಲೆಗಳು ಹಾಗೂ ಟುಟೋರಿಯಲ್‌ಗಳು ಎಷ್ಟು ?

ಆ) ಟ್ಯುಟೋರಿಯಲ್‌ಗೆ ಬಾರದ ವಿದ್ಯಾರ್ಥಿಗಳಿಗೆ ಶಾಲೆಗಳಲ್ಲಿ ದಂಡನೆ, ಅನುತ್ತೀರ್ಣತೆ ಮತ್ತು ಟ್ಯುಟೋರಿಯಲ್‌ಗೆ ಸೇರಿದವರಿಗೆ ಶಾಲೆಗೆ ಬಾರದಿದ್ದರೂ ಉತ್ತೀರ್ಣತೆ ಹಾಗೂ ಉತ್ತೇಜನ ಕೊಡುತ್ತಿರುವ ಶಿಕ್ಷಕ ಹಾಗೂ ವ್ಯವಸ್ಥಾಪಕ ವೃಂದಗಳ ಅವ್ಯವಹಾರ ಹೆಚ್ಚಿ ಶಿಕ್ಷಣ ಮಟ್ಟ ಇಳಿಮುಖವಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿಯೇ ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಈ) ಹಾಗಿದ್ದಲ್ಲಿ ಈ ಬಗ್ಗೆ ನಿಷ್ಪಕ್ಷಪಾತವಾದ ಉನ್ನತ ಮಟ್ಟದ ತನಿಖೆ ನಡೆಸಿ ಕ್ರಮ ಜರುಗಿಸಲು ಕ್ರಮಂ ಕೈಗೊಳ್ಳುವರೆ ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು).—

ಅ) ಪ್ರೌಢಶಾಲೆಗಳು — ೨೬೬೮
ಪ್ರಾಥಮಿಕ ಶಾಲೆಗಳು — ೩೫೯೯
ಟ್ಯುಟೋರಿಯಲ್‌ಗಳು — ಇಲಾಖಾ ವ್ಯಾಪ್ತಿಗೆ ಬರುವುದಿಲ್ಲ.

ಆ) ಬಂದಿರುವುದಿಲ್ಲ.
ಇ) ಉದ್ಭವಿಸುವುದಿಲ್ಲ.
ಈ) ಉದ್ಭವಿಸುವುದಿಲ್ಲ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಇವತ್ತು ಅನೇಕ ಟ್ಯುಟೋರಿಯಲ್ಸ್‌ಗಳು ಪ್ರಾರಂಭವಾಗಿ ಶಾಲೆಗಳಿಗೆ ವಿದ್ಯಾರ್ಥಿಗಳು ಬರುವುದು ಕಡಿಮೆಯಾಗಿದೆ. ಅದರ ಜೊತೆಗೆ ಟ್ಯುಟೋರಿಯಲ್‌ಗಳಿಗೆ ಸೇರದೇ ಇರುವಂತಹ ವಿದ್ಯಾರ್ಥಿಗಳನ್ನು ಶಿಕ್ಷೆ ರೂಪದಲ್ಲಿ ಫೇಲ್ ಮಾಡಿಸುತ್ತಿದ್ದಾರೆ. ಈ ರೀತಿಯಾಗಿ ವಿದ್ಯಾರ್ಥಿಗಳು ಅನಾವಶ್ಯಕವಾಗಿ ಶಿಕ್ಷೆಗೆ ಗುರಿಯಾಗುತ್ತಿದ್ದಾರೆ, ಇದನ್ನು ತಪ್ಪಿಸಲಿಕ್ಕೆ ಟ್ಯುಟೋರಿಯಲ್ಸ್‌ಗಳನ್ನು ನಿಯಂತ್ರಣ ಮಾಡಿ ಸರಿಯಾದ ರೀತಿಯಲ್ಲಿ ಇವು ತಹಬಂದಿಗೆ ತರಲಿಕ್ಕೆ ಸರ್ಕಾರಕ್ಕೆ ಸಾಧ್ಯವೇ ? ನನಗೆ ತಿಳಿದ ಮಟ್ಟಿಗೆ ಡಾಕ್ಟರ್‌ಗಳಿಗೆ ನರ್ಸಿಂಗ್ ಹೋಮಿನಲ್ಲಿ ಪ್ರಾಕ್ಟೀಸ್ ಮಾಡಬಹುದು ಎನ್ನುವ ಒಂದು ರಿಯಾಯಿತಿ ಏನು ಇದೆ ಅದು ಇಲ್ಲಿಯೂ ಇದ್ದಹಾಗೆ ಕಾಣುತ್ತದೆ. ಟ್ಯುಟೋರಿಯಲ್‌ಗಳಿಗೆ ಹೋಗಿ ಪಾಠ ಹೇಳತಕ್ಕಂತಹ ಉಪಾಧ್ಯಾಯರಿಗೆ ನಿಷೇಧ ಹಾಕುವ ರೂಪದಲ್ಲಿ ಅಂದರೆ ಯಾರು ಟ್ಯುಟೋರಿಯಲ್ಸ್‌ಗಳಿಗೆ ಹೋಗಿ ಪಾಠ ಹೇಳುತ್ತಾರೆ. ಅವರು ಶಾಲೆಯಲ್ಲಿ ಪಾಠ ಹೇಳಿದ ಹಾಗೆ ಮಾಡಲಿಕ್ಕೆ ಸಾಧ್ಯವೇ ? ಎರಡನೆಯದಾಗಿ, ಪ್ರೈವೇಟ್ ಶಾಲೆಗಳನ್ನು ಅದರಲ್ಲೂ ಪ್ರೈಮರಿ ತರಗತಿಯ ಶಾಲೆಗಳನ್ನು ಇಂಗ್ಲೀಷ್ ಮೀಡಿಯಂನಲ್ಲಿ ತೆರೆಯುತ್ತಿದ್ದಾರೆ. ಇವು ಬಹಳಷ್ಟು ಪ್ರಾರಂಭವಾಗಿವೆ. ನಮ್ಮ ರಾಜ್ಯದಲ್ಲಿ ಕನ್ನಡಕ್ಕೆ ಮೊದಲು ಆದ್ಯತೆ ಕೊಟ್ಟು ಕನ್ನಡವನ್ನು ಬೆಳೆಸಬೇಕೆಂಬ ದೃಷ್ಟಿಯಿಂದ ಕನ್ನಡಕ್ಕೆ ಮೊದಲು ಆದ್ಯತೆ ನೀಡಬೇಕೆಂಬ ಘೋಷಣೆ ಮಾಡಿದರೂ ಕೂಡ ಇಂಗ್ಲೀಷ್ ಪ್ರೈಮರಿ ಶಾಲೆಗಳು ಉದ್ಭವವಾಗುತ್ತಿರುವುದನ್ನು ನೋಡಿದರೆ ಕನ್ನಡಕ್ಕೆ ಆದ್ಯತೆ ಸಿಕ್ಕುತ್ತದೆಯೋ ಇಲ್ಲವೋ ಎಂಬ ಅನುಮಾನ ಬರುತ್ತಿದೆ. ಇದನ್ನು ತಪ್ಪಿಸಲಿಕ್ಕೆ ಏನಾದರೂ ಕಾರ್ಯಕ್ರಮ ಹಾಕಿಕೊಳ್ಳುತ್ತೀರಾ ಎಂದು ಮಾನ್ಯ ಮಂತ್ರಿಗಳ ಉತ್ತರವನ್ನು ನಾನು ನಿರೀಕ್ಷೆ ಮಾಡುತ್ತೇನೆ.

ಶ್ರೀ ಬಿ. ಸೋಮಶೇಖರ್.—ಈ ಟ್ಯುಟೋರಿಯಲ್‌ಗಳನ್ನು ನಿಯಂತ್ರಣ ಮಾಡತಕ್ಕಂತಹ ಒಂದು ಕಾನೂನು ಸಧ್ಯಕ್ಕೆ ಇಲ್ಲ. ಆದರೆ ನಾವು ಶಿಕ್ಷಣದ ಮುಸೂದೆಯಲ್ಲಿ ಇದನ್ನು ನಿಯಂತ್ರಣ ಮಾಡತಕ್ಕ ಅಂಶವನ್ನು ಅಳವಡಿಸಿದ್ದೇವೆ. ಇದಕ್ಕೆ ಕೇಂದ್ರ ಸರಕಾರದ ಅನುಮತಿ ಆದಷ್ಟು ಬೇಗ ಸಿಗುವ ನಿರೀಕ್ಷಣೆ ಇದೆ. ಆಗ ಈ ಟ್ಯುಟೋರಿಯಲ್‌ಗಳನ್ನು ನಿಯಂತ್ರಣ ಮಾಡತಕ್ಕ ಅಧಿಕಾರ ಸರಕಾರಕ್ಕೆ ಬರುತ್ತದೆ. ಅದು ಇಲ್ಲದಿದ್ದರೆ ಖಾಸಗೀ ಟ್ಯುಟೋರಿಯಲ್‌ಗಳು ಕಡಿಮೆಯಾಗಿ ಸರಕಾರದ ವತಿಯಿಂದಲೇ ಏನಾದರೂ ವ್ಯವಸ್ಥೆ ಮಾಡಿ ಈ ವಿದ್ಯಾರ್ಥಿಗಳನ್ನು ಶೋಷಣೆ ಮಾಡತಕ್ಕಂತಹ ಪ್ರಯತ್ನ ಏನು ಇದೆ, ಇದನ್ನು ತಪ್ಪಿಸುವ ಪ್ರಯತ್ನ ಮಾಡುತ್ತೇವೆ. ಇದರ ಬಗ್ಗೆ ಅವರ ಸಲಹೆಗಳೇನಾದರೂ ಇದ್ದರೆ ಅದನ್ನು ಕೊಟ್ಟರೆ, ಆ ಬಗ್ಗೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೇ, ಪ್ರಶ್ನೆ ಸಂಖ್ಯೆ ೧೨೮೮ಕ್ಕೆ ಸಂಬಂಧಿಸಿದಂತೆ ನನಗೆ ಫೈಲ್ ಬಂದಿಲ್ಲದಿರುವುದರಿಂದ ಇದನ್ನು ಮುಂದಕ್ಕೆ ಹಾಕಬೇಕೆಂದು ಕೋರುತ್ತೇನೆ. ಕ್ಷಮಿಸಿ.

ಅಧ್ಯಕ್ಷರು.—ಇದನ್ನು ತಡೆ ಹಿಡಿಯಲಾಗಿದೆ.